**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.8307/2022**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿ:- ಲಿಂಗರಾಜ ಬಿನ್ ಚಿಕ್ಕ ಲಗುಮಪ್ಪ, 25 ವರ್ಷ
ವಾಸ: ಲಿಂಗಾಪುರ ಗ್ರಾಮ, ನಂದಗುಡಿ ಹೋಬಳಿ,
ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀಮತಿ. ಚೈತ್ರಾ ವ. ಕುಲಕರ್ಣಿ, ಬಿ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 29.01.2022 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಲಿಂಗಾಪುರ ಗ್ರಾಮದ ಚಾ.ಸಾ.1ರವರ ಮನೆಯ ಮುಂಭಾಗದಲ್ಲಿ ಚಾ.ಸಾ.1 ರಿಂದ 3ರವರು ಮನೆಯಲ್ಲಿದ್ದಾಗ ಆರೋಪಿಯಾದ ನೀವು ಚಾ.ಸಾ.1ರವರನ್ನು ಕುರಿತು ಮನೆಯಿಂದ ಆಚೆ ಬಾರೋ, ಇಲ್ಲಾ ಅಂದರೆ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳಿ ಕೂಗುತ್ತಾ ಪ್ರಾಣ ಬೆದರಿಕೆ ಹಾಕುವ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.506ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸ್ಥಳದಲ್ಲಿ, ಚಾ.ಸಾ.1ರವರು ಮನೆಯಿಂದ ಆಚೆ ಬಂದಾಗ ಆರೋಪಿಯಾದ ನೀವು ಏಕಾಏಕಿ ಚಾ.ಸಾ.1ರವರಿಗೆ ಚಾಕುವಿನಿಂದ ಚುಚ್ಚಲು ಪ್ರಯತ್ನಿಸಿದ್ದು ಆಗ ಚಾ.ಸಾ.1ರವರು ತಮ್ಮ ಕೈಯನ್ನು ಅಡ್ಡ ಇಟ್ಟಿದ್ದರಿಂದ ಅವರ ಎಡಗೈಗೆ ತೀವ್ರ ಸ್ವರೂಪದ ರಕ್ತಗಾಯವಾಗಿರುತ್ತದೆ ಎಂದು ಆರೋಪಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.326ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.8307/2022**

ಪಿರ್ಯಾದುದಾರರು:– ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿ:– ಲಿಂಗರಾಜ ಬಿನ್ ಚಿಕ್ಕ ಲಗುಮಪ್ಪ, 25 ವರ್ಷ
ವಾಸ: ಲಿಂಗಾಪುರ ಗ್ರಾಮ, ನಂದಗುಡಿ ಹೋಬಳಿ,
ಹೊಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ:16.02.2023 ರಂದು ಧೃಢೀಕರಿಸಿದ್ದೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**